ಕರ್ನಾಟಕ ಸರ್ಕಾರ

**ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,**

**ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ದಾವಣಗೆರೆ.**

ಸಂ:ಕಾಇಂ:ಪಂರಾಇಂ:ವಿದಾ:ಸ.ಇಂ:ಕೆಪಿಪಿಪಿ:2026–27 ದಿನಾಂಕ: 20/06/2026

**ಟೆಂಡರ್ ಪ್ರಕಟಣೆ (" ಕೆಪಿಪಿಪಿ – ಪ್ರೊಕ್ಯೂರ್‌ಮೆಂಟ್ " ಮೂಲಕ)**

ಈ ವಿಭಾಗದಿಂದ ಕೆಳಕಂಡ ಕಾಮಗಾರಿಗೆ ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ದಾವಣಗೆರೆ ಇವರು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಇ–ಟೆಂಡರ್‌ಗಾಗಿ ಇ–ಪ್ರಕ್ಯೂರ್‌ಮೆಂಟ್ ಸೆಲ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಾಮವಳಿಯ ಮೇರೆಗೆ **ಕೆಪಿಪಿಪಿ–ಪ್ರೊಕ್ಯೂರ್‌ಮೆಂಟ್** ಮುಖಾಂತರ ಐಟಂವಾರು ಏಕ & ದ್ವಿ–ಲಕೋಟೆಯಲ್ಲಿ ಟೆಂಡರ್‌ಗಳನ್ನು **Standard Tender Documents for procurement of works** ನಮೂನೆಯಲ್ಲಿ ಆಹ್ವಾನಿಸಲಾಗಿದೆ.

| | | | |
|---|---|---|---|
| 1 | ಖಾಲಿ ಟೆಂಡರ್ ದಾಖಲಾತಿಗಳಿಗಾಗಿ ಅರ್ಜಿ ಸ್ವೀಕರಿಸುವ ಹಾಗೂ ಭರ್ತಿ ಮಾಡಲಾದ ಟೆಂಡರ್ ದಾಖಲಾತಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ | : | 04–07–2026 ಸಂಜೆ 5.00 ಘಂಟೆಗೆ |
| 2 | ಟೆಂಡರ್ ತೆರೆಯುವ/ತಾಂತ್ರಿಕ ಬಿಡ್ ತೆರೆಯವ ದಿನಾಂಕ (ಕ್ರ.ಸಂ 8) | : | 06–07–2026 ಬೆಳಿಗ್ಗೆ 11.00 ಘಂಟೆಗೆ |
| 3 | ಆರ್ಥಿಕ ಬಿಡ್ ತೆರೆಯವ ದಿನಾಂಕ (ಕ್ರ.ಸಂ 8) | : | 8–07–2026 ಬೆಳಿಗ್ಗೆ 11.00 ಘಂಟೆಗೆ |

| ಕ್ರ. ಸಂ | ಕಾಮಗಾರಿ ಹೆಸರು | ಟೆಂಡರ್‌ಗೆ ಇಟ್ಟ ಮೊತ್ತ ರೂ. ಲಕ್ಷಗಳಲ್ಲಿ | ಇ.ಎಂ.ಡಿ. ರೂ.ಗಳಲ್ಲಿ | ಖಾಲಿ ಟೆಂಡರ್ ಫಾರಂ ಬೆಲೆ (ತೆರಿಗೆ ಸೇರಿಸಿಕೊಂಡು) ರೂ ಗಳಲ್ಲಿ | ಕಾಮಗಾರಿ ಮುಗಿಸುವ ಅವಧಿ | ಗುತ್ತಿಗೆದಾರರ ಅರ್ಹತೆ | ಟೆಂಡರ್ ನಮೂನೆ | ಮೀಸಲಾತಿ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| | **2025–26 ನೇ ಸಾಲಿನ ಪದವಿ ಪೂರ್ವ ಕಾಲೇಜುಗಳ ಮೂಲಭೂತ ಸೌಕರ್ಯ** | | | | | | | |
| 1 | ಜಗಳೂರು ತಾ॥ ಪಲ್ಲಾಗಟ್ಟೆ ಗ್ರಾಮದ ಸರ್ಕಾರಿ ಬಾಲಕರ ಪದವಿಪೂರ್ವ ಕಾಲೇಜಿನ ಶೌಚಾಲಯ ನಿರ್ಮಾಣ(2ನೇ ಕರೆ) | 7.18 | 8975.00 | ಕೆಪಿಪಿಪಿ–ಪ್ರಕ್ಯೂರ್ ಮೆಂಟ್ ಪೋರ್ಟಲ್ ಪ್ರಕಾರ | 03 ತಿಂಗಳು | 4 ನೇ ದರ್ಜೆ ಮತ್ತು ಮೇಲ್ಪಟ್ಟು | KW I | ಕೆಟಗರಿ–2ಎ |

| | | | | | | | | |
|---|---|---|---|---|---|---|---|---|
| | **2025–26 ನೇ ಸಾಲಿನ ಮಲೆನಾಡು ಪ್ರದೇಶಾಭಿವೃದ್ಧಿ ಯೋಜನೆ** | | | | | | | |
| 2 | ನ್ಯಾಮತಿ ತಾ॥ ಬಸವನಹಳ್ಳಿ ಗ್ರಾಮ ಪಂಚಾಯತಿ ಕಛೇರಿ ಕಟ್ಟಡದ ಮುಂದುವರೆದು ಕಾಮಗಾರಿ(2ನೇ ಕರೆ) | 6.76 | 16900.00 | ಕೆಪಿಪಿಪಿ–ಪ್ರಕ್ಯೂರ್ ಮೆಂಟ್ ಪೋರ್ಟಲ್ ಪ್ರಕಾರ | 03 ತಿಂಗಳು | 4 ನೇ ದರ್ಜೆ ಮತ್ತು ಮೇಲ್ಪಟ್ಟು | KW I | ಸಾಮಾನ್ಯ |
| | **2024–25 ನೇ ಸಾಲಿನ ಪದವಿ ಪೂರ್ವ ಕಾಲೇಜುಗಳ ಮೂಲಭೂತ ಸೌಕರ್ಯ** | | | | | | | |
| 3 | ದಾವಣಗೆರೆ ತಾ॥ ಮಾಯಕೊಂಡ ಸರ್ಕಾರಿ ಪದವಿ ಪೂರ್ವ ಕಾಲೇಜು ದುರಸ್ಥಿ(2ನೇ ಕರೆ) | 15.89 | 19863.00 | ಕೆಪಿಪಿಪಿ–ಪ್ರಕ್ಯೂರ್ ಮೆಂಟ್ ಪೋರ್ಟಲ್ ಪ್ರಕಾರ | 03 ತಿಂಗಳು | 4 ನೇ ದರ್ಜೆ ಮತ್ತು ಮೇಲ್ಪಟ್ಟು | KW I | ಎಸ್.ಸಿ |
| | **ಮಹಿಳಾ ಮತ್ತು ಕಲ್ಯಾಣ ಇಲಾಖೆ & ನರೇಗ ಒಗ್ಗೂಡುಸುವಿಕೆ ಯೋಜನೆ** | | | | | | | |
| 4 | ಚನ್ನಗಿರಿ ತಾ॥ ಸಂತೇಬೆನ್ನೂರು ಗ್ರಾಮದ ಅಂನವಾಡಿ–12ರ ಹೊಸ ಕಟ್ಟಡ ನಿರ್ಮಾಣ(2ನೇ ಕರೆ) | 10.04 | 25100.00 | ಕೆಪಿಪಿಪಿ–ಪ್ರಕ್ಯೂರ್ ಮೆಂಟ್ ಪೋರ್ಟಲ್ ಪ್ರಕಾರ | 05 ತಿಂಗಳು | 4 ನೇ ದರ್ಜೆ ಮತ್ತು ಮೇಲ್ಪಟ್ಟು | KW I | ಸಾಮಾನ್ಯ |
| | **2025–26ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಮತ್ತು ಪ್ರೌಢ ಶಾಲಾ ಕೊಠಡಿಗಳ ದುರಸ್ಥಿ** | | | | | | | |
| 5 | ಚನ್ನಗಿರಿ ತಾ॥ ಚಿರಡೋಣಿ ಗ್ರಾಮದ ಸರ್ಕಾರಿ ಹಿರಿಯ ಬಾಲಕಿಯರ ಪ್ರಾಥಮಿಕ ಶಾಲೆ ದುರಸ್ಥಿ | 5.78 | 14450.00 | ಕೆಪಿಪಿಪಿ–ಪ್ರಕ್ಯೂರ್ ಮೆಂಟ್ ಪೋರ್ಟಲ್ ಪ್ರಕಾರ | 03 ತಿಂಗಳು | 4 ನೇ ದರ್ಜೆ ಮತ್ತು ಮೇಲ್ಪಟ್ಟು | KW I | ಸಾಮಾನ್ಯ |
| 6 | ಹೊನ್ನಾಳಿ ತಾ॥ ಮಾದನಬಾವಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕೊಠಡಿಗೆ ಮೇಲ್ಛಾವಣಿ ಮತ್ತು ದುರಸ್ಥಿ | 5.09 | 12725.00 | | 03 ತಿಂಗಳು | 4 ನೇ ದರ್ಜೆ ಮತ್ತು ಮೇಲಟ್ಟು | KW I | ಸಾಮಾನ್ಯ |
| 7 | ಹೊನ್ನಾಳಿ ತಾ॥ ಹನುಮಸಾಗರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕೊಠಡಿಗೆ ಮೇಲ್ಛಾವಣಿ ಮತ್ತು ದುರಸ್ಥಿ | 5.09 | 12725.00 | | 03 ತಿಂಗಳು | 4 ನೇ ದರ್ಜೆ ಮತ್ತು ಮೇಲ್ಪಟ್ಟು | KW I | ಸಾಮಾನ್ಯ |
| | **2025–26 ನೇ ಸಾಲಿನ 5054–03–337–0–75–059** | | | | | | | |
| 8 | ದಾವಣಗೆರೆ ತಾ॥ ಮಾಯಕೊಂಡ ವಿಧಾನಸಭಾ ಕ್ಷೇತ್ರ ವಾಪ್ತಿಯ ಕೊಡಗನೂರು ಕೆರೆಯ ಕೋಡಿಯಿಂದ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಹೋಗುವ ರಸ್ತೆ ಅಭವೃದ್ಧಿ | 83.31 | 166620.00 | ಕೆಪಿಪಿಪಿ–ಪ್ರಕ್ಯೂರ್ ಮೆಂಟ್ ಪೋರ್ಟಲ್ ಪ್ರಕಾರ | 05 ತಿಂಗಳು | 3 ನೇ ದರ್ಜೆ ಮತ್ತು ಮೇಲ್ಪಟ್ಟು | KW III | ಸಾಮಾನ್ಯ |
| | **2023–24ನೇ ಸಾಲಿನ ಪ್ರಧಾನ ಮಂತ್ರಿ ಆದಿ ಆದರ್ಶ ಯೋಜನೆ** | | | | | | | |
| 9 | ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕಿನ ಬಿಸ್ತುವಳ್ಳಿ ಗ್ರಾ.ಪಂ. ವ್ಯಾಪ್ತಿಯ ಬುಳ್ಳೇನಹಳ್ಳಿ ಗ್ರಾಮದಲ್ಲಿ ಸೋಲಾರ್ ಬೀದಿ ದೀಪ ಅಳವಡಿಕೆ ನಿರ್ಮಾಣ ಕಾಮಗಾರಿ | 5.83 | 14575.00 | ಕೆಪಿಪಿಪಿ–ಪ್ರಕ್ಯೂರ್ ಮೆಂಟ್ ಪೋರ್ಟಲ್ ಪ್ರಕಾರ | 03 ತಿಂಗಳು | 4 ನೇ ದರ್ಜೆ ಮತ್ತು ಮೇಲ್ಪಟ್ಟು | KW I | ಸಾಮಾನ್ಯ |

**ಷರತ್ತುಗಳು:**

1. ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯ ಹಾಲಿ ನೊಂದಾಯಿತ ಗುತ್ತಿಗೆದಾರರಾಗಿರಬೇಕು. ಗುತ್ತಿಗೆದಾರರ ನೊಂದಣಿ ಸಂಖ್ಯೆ ಮತ್ತು ದಿನಾಂಕ ಹಾಗೂ GST ಸಂಖ್ಯೆಗಳನ್ನು ನಮೂದಿಸಿರಬೇಕು.
2. ಗುತ್ತಿಗೆದಾರರು ಖಾಲಿ ಟೆಂಡರ್ ಫಾರಂಗಳಿಗೆ ಮತ್ತು EMDಗೆ ನಿಗದಿಪಡಿಸಿದ ಹಣವನ್ನು e-payment ಅಥವಾ NEFT challan ಮೂಲಕ ಸಲ್ಲಿಸತಕ್ಕದ್ದು, ಖಾಲಿ ಟೆಂಡರ್ ಫಾರಂ ಹಣವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸುವುದಿಲ್ಲ.
3. ಟೆಂಡರ್‌ನಲ್ಲಿ ಭಾಗವಹಿಸುವ ಗುತಿಗೆದಾರರು ಷರತ್ತು ಮತ್ತು ನಿಬಂಧನೆಗಳನ್ನು ಇ-ಪ್ರೋಟಲ್‌ನಲ್ಲಿ ವಿವರಿಸಿದಂತೆ ಅಫ್ ಲೋಡ್ ಮಾಡುವುದು
4. ಖಾಲಿ ಟೆಂಡರ್ ಡಾಕ್ಯೂಮೆಂಟನ್ನು www.KPPP.karnataka.gov.in ವೆಬ್‌ಸೈಟಿನಲ್ಲಿ ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ:08192-250156 ರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.
5. ಗುತ್ತಿಗೆದಾರರು ನಮೂದಿಸಿದ ದರವು ಟೆಂಡರ್‌ಗಿಟ್ಟ ಮೊತ್ತಕ್ಕಿಂತ ಕಡಿಮೆ ಇದ್ದ ಪಕ್ಷದಲ್ಲಿ ವ್ಯತ್ಯಾಸದ ಮೊತ್ತವನ್ನು ಹಾಗೂ KW ನಿಯಮಾನುಸಾರ ಟೆಂಡರ್‌ಕರಾರು ಮಾಡುವ ಮುಂಚೆ ಅನುಮೋದನೆಯಾದ ಮೊತ್ತಕ್ಕೆ ಶೇ.5 ರಂತೆ ಭದ್ರತಾಠೇವಣಿಯನ್ನು FDR ರೂಪದಲ್ಲಿ ನೀಡಬೇಕು.
6. ಸರ್ಕಾರಿ ಆದೇಶದಂತೆ ಲೇಬರ್ ಸೆಸ್ ಶೇ.1% ರಂತೆ ಬಿಲ್ಲಿನಲ್ಲಿ ಕಡಿತ ಮಾಡಲಾಗುವುದು.
7. ಕಾಮಗಾರಿಗಳಿಗಾಗಿ ಬೇಕಾಗುವ ಸಿಮೆಂಟ್, ಕಬ್ಬಿಣ ಹಾಗೂ ಇತ್ಯಾದಿ ಸಾಮಗ್ರಿಗಳನ್ನು ಗುತ್ತಿಗೆದಾರರೇ ಸರಬರಾಜು ಮಾಡಿಕೊಳ್ಳಬೇಕಾಗಿರುವುದರಿಂದ, ಸದರಿ ಸಾಮಗ್ರಿಗಳು ಐ.ಎಸ್.ಐ. ತಾಂತ್ರಿಕಗುಣಮಟ್ಟ ಹೊಂದಿರಬೇಕು ಹಾಗೂ ಸಾಮಗ್ರಿಗಳ ಗುಣಮಟ್ಟ ಪರೀಕ್ಷೆಯನ್ನುಕಾಮಗಾರಿ ಪ್ರಾರಂಭಿಸುವುದಕ್ಕೆ ಮುಂಚಿತವಾಗಿ ಗುತ್ತಿಗೆದಾರರೇ ತಮ್ಮ ಸ್ವಂತಖರ್ಚಿನಲ್ಲಿ ಮಾಡಿಸಿ ವರದಿಗಳನ್ನು ಒದಗಿಸಬೇಕು.
8. ಯಾವುದೇ ಕಾರಣವನ್ನು ನೀಡದೇ ಟೆಂಡರ್ ತಿರಸ್ಕರಿಸುವ ಅಧಿಕಾರವನ್ನು ಕೆಳಗೆ ಸಹಿ ಮಾಡಿದವರು ಕಾಯ್ದಿರಿಸಿಕೊಳ್ಳಲಾಗಿದೆ. ಯಾವುದೇ ಕಾರಣಕ್ಕೆ ನಿಗದಿಪಡಿಸಿದ ಕೊನೆಯ ದಿನಾಂಕದಂದು ಸಂಪರ್ಕಜಾಲ (ಆನ್‌ಲೈನ್) ಸಿಗದಿದ್ದರೆ ಈ ಕಛೇರಿಯು ಜವಾಬ್ದಾರಿಯಲ್ಲ.
9. ಟೆಂಡರ್ ಅನುಮೋದನೆಯಾದ ಗುತ್ತಿಗೆದಾರರಿಗೆ ಒಪ್ಪಿಗೆ ಪತ್ರತಲುಪಿದ 20 ದಿನದೊಳಗಾಗಿ ಕಾರ್ಯಾದೇಶ ಮಾಡಿಕೊಳ್ಳತಕ್ಕದ್ದು. ಇಲ್ಲವಾದಲ್ಲಿ KW ನಿಯಮವಳಿ ಪ್ರಕಾರ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಟೆಂಡರ್ ರದ್ದು ಪಡಿಸಲಾಗುವುದು ಹಾಗೂ ಈ ಬಗ್ಗೆ ಮತ್ಯಾವುದೇ ಪತ್ರ ವ್ಯವಹಾರ ನಡೆಸಲಾಗುವುದಿಲ್ಲ.
10. ಟೆಂಡರ್‌ಕಾಮಗಾರಿ ಪೂರ್ಣಗೊಂಡ ನಂತರ 1 ವರ್ಷಗಳ ಕಾಲ ನಿರ್ವಹಣೆಯ ಜವಾಬ್ದಾರಿ ಗುತ್ತಿಗೆದಾರರವರದೇ ಆಗಿರುತ್ತದೆ.
11. ಸಾರ್ವಜನಿಕ ಸಂಗ್ರಹಣೆಕಾಯ್ದೆ 1999 ಮತ್ತು ವಿಶೇಷ ಕಾಯ್ದೆ 2000 ಅಡಿಯಲ್ಲಿ ಗೊತ್ತುಪಡಿಸಿರುವ ಪಾರದರ್ಶಕೆ ನಿಯಮ, ನಿಬಂಧನೆಗಳು ಹಾಗೂ ಆಡಳಿತಾತ್ಮಕ ಮಂಜೂರಾತಿಯಲ್ಲಿ ವಿಧಿಸಿರುವ ಷರತ್ತುಗಳು ಅನ್ವಯಿಸುತ್ತವೆ.

**ಪ್ರತಿಯನ್ನು ಈ ಕೆಳಕಂಡವರ ಮಾಹಿತಿಗಾಗಿ ಸಲ್ಲಿಸಲಾಗಿದೆ/ ಕಳುಹಿಸಲಾಗಿದೆ :**

1. ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಶೇಷಾದ್ರಿಪುರಂ, ಬೆಂಗಳೂರು.
3. ಜಿಲ್ಲಾಧಿಕಾರಿಗಳು, ಹಾಗೂ ಜಿಲ್ಲಾ ಬುಲೆಟಿನ್ ಅಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ.
4. ಅಧೀಕ್ಷಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ದಾವಣಗೆರೆ.
6. ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹರಪನಹಳ್ಳಿ/ಶಿವಮೊಗ್ಗ/ ಚಿತ್ರದುರ್ಗ
7. ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ವಿಭಾಗ, ದಾವಣಗೆರೆ/ಚಿತ್ರದುರ್ಗ/ಶಿವಮೊಗ್ಗ
8. ಕಾರ್ಯಪಾಲಕ ಇಂಜಿನಿಯರ್, ಜಲ ಸಂಪನ್ಮೂಲ ಇಲಾಖೆ, ನಂ-3 ನಾಲಾ ವಿಭಾಗ, ಮಲೆಬೆನ್ನೂರು/ ನಂ-5 ನಾಲಾ ವಿಭಾಗ, ದಾವಣಗೆರೆ.
9. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ. ಉಪ ವಿಭಾಗ, ದಾವಣಗೆರೆ/ಹರಿಹರ/ಹೊನ್ನಾಳಿ /ಚನ್ನಗಿರಿ.
10. ಇ- ಪ್ರಕ್ಯೂರ್ ಮೆಂಟ್ ಕೋಶ ಬಹುಮಹಡಿ ಕಟ್ಟಡ, ಬೆಂಗಳೂರು ಇವರ ಮಾಹಿತಿಗಾಗಿ ಕಳುಹಿಸುತ್ತಾ ಸಂಬಂಧಪಟ್ಟವರನಗನು ಮೇಲ್ಕಂಡ ಟೆಂಡರ್ ಸಂಬಂಧ ಈ ಕಛೇರಿಗೆ ಕೂಡಲೇ ನಿಯೋಜಿಸಲು ಸೂಚಿಸಲಾಗಿದೆ.
11. ಈ ಕಚೇರಿಯ ಆಡಿಟ್ ಆಫೀಸರ್/ ನಗದು ಶಾಖೆ/ ನಾಮಫಲಕ.

ಸಹಿ/-
ಕಾರ್ಯಪಾಲಕ ಇಂಜಿನಿಯರ್,
ಪಂ.ರಾ.ಇಂ ವಿಭಾಗ, ದಾವಣಗೆರೆ.